
SERVICE ABOVE SELF



Rotary

विश्वमित्रः

# ವಿಶ್ವಮಿತ್ರ

# VISHWAMITHRA

Weekly House Bulletin of Rotary Club Shimoga, R.I. Dist. 3182

Rotary THE MAGIC OF ROTARY 2024-25

Rtn. Stephanie A. Urchick
RI President 2024-25

Rtn. CA Dev Anand
District Governor 2024-25

Rtn. K. Sooryanarayana Udpa
President, Mob: 99009 66114

Rtn. N.G. Usha
Secretary, Mob : 81975 92278

Rtn. M. Madhavachar
Bulletin Editor, Mob: 98862 73495

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 67 ಸಂಚಿಕೆ –11 ದಿನಾಂಕ : 25–09–2024

## ದಿನಾಂಕ: 25.09.2024 ರ ವಾರದ ಸಭೆಯ ವರದಿ

**ದಿನಾಂಕ: 25.09.2024 ರಂದು ಬುಧವಾರ 3ನೇ ಕೌಟುಂಬಿಕ ಸ್ನೇಹಮಿಲನ ಕಾರ್ಯಕ್ರಮ–ರೋಟರಿ ಯುವಕೇಂದ್ರದ ಸಭಾಂಗಣದಲ್ಲಿ ಅದ್ದೂರಿಯಾಗಿ ನಡೆಯಿತು. ಅಂದು ಜ್ಞಾನವೇ ಶಕ್ತಿ ಎಂಬ ಧ್ಯೇಯ ವಾಕ್ಯದೊಂದಿಗೆ ಶಿಕ್ಷಕರಿಗೆ ಅಭಿನಂದನೆ – ಶಿಕ್ಷಕರಿಂದ ಮನರಂಜನೆ ಕಾರ್ಯಕ್ರಮ ನಡೆಯಿತು. ಅಂದಿನ ವೇದಿಕೆಯಲ್ಲಿ ಅಧ್ಯಕ್ಷರಾದ ರೊ.ಕೆ.ಸೂರ್ಯನಾರಾಯಣ ಉಡುಪರು, ಕಾರ್ಯದರ್ಶಿ ರೊ.ಎನ್.ಜಿ. ಉಷಾ ಮತ್ತು ಕಾರ್ಯಕ್ರಮ ಸಮಿತಿ ಚೇರ್ಮನ್ ರೊ.ಎನ್. ವಿ.ಭಟ್ ಉಪಸ್ಥಿತರಿದ್ದು ಅವರ ನಿರೂಪಣೆಯೊಂದಿಗೆ ಕಾರ್ಯಕ್ರಮ ಯಶಸ್ವಿಯಾಗಿ ಮೂಡಿ ಬಂದಿತು.**




ರೊ. ರೇಣುಕಾ ಶ್ರೀನಾಥರವರಿಂದ ವಿದ್ಯೆಗೆ ಅಧಿದೇವತೆ ಶಾರದಾಂಬೆಯ ಮೇಲಿನ ಗೀತೆ "ಶೃಂಗಪುರಾಧೀಶ್ವರಿ ಶಾರದೇ ಶುಭಮಂಗಳೇ ಸರ್ವಾದಿಷ್ಟಪ್ರದೇ" ಯನ್ನು ಹಾಡುವುದರ ಮೂಲಕ ಪ್ರಾರ್ಥನೆಯನ್ನು ಮಾಡಿದರು. ಸಹ ಕಾರ್ಯದರ್ಶಿ ರೊ.ಸಿ.ವಿಜಯ ಕುಮಾರ್‌ರವರು ಸರ್ವರನ್ನು ಸ್ವಾಗತಿಸಿದರು. ಕಾರ್ಯದರ್ಶಿ ರೊ.ಎನ್.ಜಿ. ಉಷಾರವರು ಪ್ರಕಟಣೆ ನೀಡಿದರು.

ಕಾರ್ಯಕ್ರಮದ ರಾಜ್ಯ ಪ್ರಶಸ್ತಿ ವಿಜೇತ ಶಿಕ್ಷಕಿ ಶ್ರೀಮತಿ ಭಾಗೀರಥಿ ಇವರಿಗೆ ಸನ್ಮಾನ ಕಾರ್ಯಕ್ರಮವನ್ನು ನೆರವೇರಿಸಲಾಯಿತು. ಅವರ ಪರಿಚಯವನ್ನು ರೊ.ಶಾರದಾ ಗೋಪಾಲ್‌ರವರು ಸಭೆಗೆ ಮಾಡಿಕೊಟ್ಟರು. ರೊ.ರಮಾಗೋಪಾಲ್, ರೊ.ಭಾರ್ಗವಿ ಭಟ್ ಮತ್ತು ವಸಂತ ಶಾಸ್ತ್ರಿಯವರು, ಅಧ್ಯಕ್ಷರು, ಕಾರ್ಯದರ್ಶಿ ಮತ್ತು ರೊ.ಎನ್.ವಿ. ಭಟ್‌ರವರು ಪಾಲ್ಗೊಂಡಿದ್ದರು. ಇದೇ ಸಂದರ್ಭದಲ್ಲಿ ರಾಜ್ಯ ಪ್ರಶಸ್ತಿ ವಿಜೇತ ಶಿಕ್ಷಕಿ ಶ್ರೀಮತಿ ಲಕ್ಷ್ಮೀರವರಿಗೂ ಸಹ ಸನ್ಮಾನ ಮಾಡಲಾಯಿತು. ರೊ. ಎನ್.ಜಿ. ಉಷಾರವರು ಶ್ರೀಮತಿ ಲಕ್ಷ್ಮೀರವರ ಪರಿಚಯ ಮಾಡಿದರು. ಇವರಿಗೆ ರೊ.ಗಾಯತ್ರಿ ಸುಮತೀಂದ್ರ, ರೊ.ಪಿಡಿಜಿ.




ಡಾ.ಪಿ.ನಾರಾಯಣ, ಭಾರ್ಗವಿ ಭಟ್ ಮತ್ತು ರಮಾಗೋಪಾಲ್ ಮತ್ತಿತರು ಸೇರಿ ಸನ್ಮಾನಿಸಿದರು.

ಇಂಟರಾಕ್ಟ್ ಕೋ–ಆರ್ಡಿನೇಟರುಗಳಾದ ಶ್ರೀಮತಿ ಗೀತಾ, ಶ್ರೀಮತಿ ಸುನಿತಾ ಹೆಗಡೆ, ಶ್ರೀ ಸಿ. ಹಾಲೇಶಪ್ಪ, ಶ್ರೀ ರಘು, ಶ್ರೀಮತಿ ಶೋಭಾ, ಶ್ರೀ ಎರಿಸ್ವಾಮಿ ಮತ್ತು ಶ್ರೀ ವೇಣುರವರುಗಳಿಗೆ 'ಜ್ಞಾನವೇ ಶಕ್ತಿ' ಎಂಬ ವಿಷಯದ ಮೇಲೆ ಒಂದೇ ವಾಕ್ಯದಲ್ಲಿ ಹೇಳುವಂತೆ ತಿಳಿಸಲಾಗಿ ಅವರುಗಳು ತಮ್ಮ ಅಭಿಪ್ರಾಯವನ್ನು ತಿಳಿಸಿದರು. ಅವರುಗಳಿಗೆ ಅಧ್ಯಕ್ಷರಾದ ರೊ.ಕೆ.ಸೂರ್ಯನಾರಾಯಣ ಉಡುಪ ಮತ್ತು ಕಾರ್ಯದರ್ಶಿ ರೊ.ಎನ್.ಜಿ. ಉಷಾರವರು ಅಭಿನಂದಿಸಿದರು.

ನಮ್ಮ ಕ್ಲಬ್‌ನಲ್ಲಿ ಶಿಕ್ಷಕ ವೃತ್ತಿಯಲ್ಲಿರುವ ರೊ.ಗಾಯತ್ರಿ ಸುಮತೀಂದ್ರ, ರೊ.ನೀತು ದೀಪಕ್ ಮತ್ತು ರೊ.ಎನ್. ಜಿ. ಉಷಾರವರನ್ನು ರೊ.ರಮಾಗೋಪಾಲ್ ಮತ್ತು ರೊ. ಭಾರ್ಗವಿ ಭಟ್‌ರವರು ಅಭಿನಂದಿಸಿದರು. ಶ್ರೀಮತಿ ಭಾಗೀರಥಿಯವರು ಸನ್ಮಾನವನ್ನು ಸ್ವೀಕರಿಸಿ ಮಾತನಾಡುತ್ತಾ, ನಮ್ಮೆಲ್ಲಾ ಸದಸ್ಯರನ್ನು ವಂದಿಸುತ್ತಾ ಗುರುಪರಂಪರೆಯನ್ನು ತಾವುಗಳು ಗೌರವಿಸಿದ್ದೀರಿ. ಅವರ ಸೇವೆಯನ್ನು ಸ್ಮರಿಸಿದ್ದೀರಿ. ಆದುದರಿಂದ ಎಲ್ಲಾ ಶಿಕ್ಷಕರ ಪರವಾಗಿ ಕೃತಜ್ಞತೆಗಳು ಎಂದರು. ಜ್ಞಾನವನ್ನು ಉಣಬಡಿಸುವ ಕಾರ್ಯ ಹಾಗೂ ಸದಾವಕಾಶವನ್ನು ದೇವರು ನಮಗೆ ಒದಗಿಸಿಕೊಟ್ಟಿದ್ದಾನೆ ಎನ್ನುತ್ತಾ, ಶಿಷ್ಯರು ಎಷ್ಟೇ ದೊಡ್ಡವರಾದರೂ, ಉನ್ನತ ಶ್ರೇಣಿ ಅಥವಾ ಹುದ್ದೆಗೆ

2ನೇ ಪುಟಕ್ಕೆ

## ಈ ವಾರದ ಸಭೆ

**ದಿನಾಂಕ : 02–10–2024 ಬುಧವಾರ** **ಸಂಜೆ 6:45**

**ಅತಿಥಿ: ಎನ್. ದಿವಾಕರ್ ರಾವ್,** ಉಪಾಧ್ಯಕ್ಷರು, ಭಾರತೀಯ ವಿದ್ಯಾಭವನ ಹಾಗೂ ನಿರ್ದೇಶಕರು, ಎಜುರೈಟ್ ತರಬೇತಿ ಅಕಾಡೆಮಿ, ಶಿವಮೊಗ್ಗ

**ಮಾತನಾಡುವ ವಿಷಯ: 'ಬಾಂಧವ್ಯ'**

**❖ ವ್ಯಕ್ತಿ – ವ್ಯಕ್ತಿಗಳ ನಡುವಣ ಸಾಮರಸ್ಯ ❖**

ದಯವಿಟ್ಟು ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ

ಸ್ಥಳ: **ರೋಟರಿ ಯುವ ಕೇಂದ್ರ,** ಸವಳಂಗ ರಸ್ತೆ, ಶಿವಮೊಗ್ಗ



ಹೋದರೂ ಗುರುಗಳೊಂದಿಗಿನ ಭಾಂದವ್ಯ ಚೆನ್ನಾಗಿದೆ. ಗುರುಗಳ ಬಗ್ಗೆ ಗೌರವವಿದೆ. ಶಿಷ್ಯರುಗಳು ಜ್ಞಾನವಂತರಾಗಿ, ಅವರುಗಳ ಯಶಸ್ಸನ್ನು ನೋಡುವ ಗುರುಗಳೇ ಧನ್ಯರು ಎಂದರು.

ಈ ಹಿಂದೆ ಅನುಭವ ಮಂಟಪದಿಂದ ಜ್ಞಾನವನ್ನು ನೀಡಲಾಗಿದೆ. ಇದನ್ನು ಮನುಕುಲಕ್ಕೆ ಪರಿಚಯ ಮಾಡುವ ಕೆಲಸ ಮಾಡಿದ್ದಾರೆ. ನಮ್ಮ ಈ ವೃತ್ತಿ ನಮಗೆ ಗೌರವವನ್ನು ತಂದುಕೊಟ್ಟಿದೆ. ಶಿಷ್ಯ ವೃಂದದ ಜನಮಾನಸದಲ್ಲಿ ನೆಲೆಸಿರುವ ರೊ. ಗಾಯತ್ರಿ ಸುಮತೀಂದ್ರ ಉತ್ತಮ ಶಿಕ್ಷಕಿಯಾಗಿ ಕೆಲಸ ಮಾಡಿದ್ದಾರೆ. ಮುಂದೆ ಗುರಿ ಹಿಂದೆ ಗುರು ಇರಬೇಕು. ಗುರುಮುಖೇನ ಮಾಹಿತಿಗಳು ದೊರಕಿದಲ್ಲಿ ಅದಕ್ಕೊಂದು ಬೆಲೆಯಿದೆ ಎಂದರು. ಜ್ಞಾನವನ್ನು ಜ್ಯೋತಿಯಂತಹ ರೂಪದಲ್ಲಿ ಶಿಷ್ಯರಿಗೆ/ವಿದ್ಯಾರ್ಥಿಗಳಿಗೆ ಹಂಚೋಣ, ಅವರ ಅಜ್ಞಾನ ಕಳೆಯೋಣ ಎಂದರು.

ಅಧ್ಯಕ್ಷರಾದ ರೊ.ಕೆ.ಸೂರ್ಯನಾರಾಯಣ ಉಡುಪರು ಮಾತನಾಡಿ, ಇಂದು ನಾವು ಶಿಕ್ಷಕರ ದಿನಾಚರಣೆ ಪ್ರಯುಕ್ತ ಶಿಕ್ಷಕರುಗಳನ್ನು ಗೌರವಿಸಿದ್ದೇವೆ. ಅವರ ಜ್ಞಾನದ ಹಂಚುವಿಕೆಯ ಕೆಲಸ ಅಮೂಲ್ಯವಾದದ್ದು. ಅದು ನಿರಂತರವಾಗಿರಲಿ ಎಂದರು.

ಶಿಕ್ಷಕರಿಂದ ಮನರಂಜನಾ ಕಾರ್ಯಕ್ರಮ ನಡೆಯಿತು. ಶ್ರೀ ಎರ್ರಿಸ್ವಾಮಿಯವರಿಂದ–ಜೋಗದ ಸಿರಿ ಬೆಳಕಿನಲ್ಲಿ ಎಂಬ ಗೀತೆ. ಶ್ರೀ ರಘುರವರಿಂದ ಜಾನಪದಗೀತೆ ಪ್ರಸ್ತುತಪಡಿಸಲ್ಪಟ್ಟಿತು.









ಶ್ರೀ ಚಿದಾನಂದ ವಿರಚಿತ ಹಾಗೂ ನಿರ್ದೇಶಿಸಲ್ಪಟ್ಟ ಏಕ ವ್ಯಕ್ತಿ ಪ್ರದರ್ಶನ ಅತ್ಯಂತ ಯಶಸ್ವಿಯಾಗಿ ಶಿಕ್ಷಕಿ ಲಕ್ಷ್ಮೀಯವರು ಅಭಿನಯಿಸಿದರು. 12 ಶತಮಾನದ ಬಸವಣ್ಣನವರ ಕಾಲದ ಘಟನೆಗಳನ್ನು ಅತ್ಯಂತ ಭಾವ ಪೂರ್ಣವಾಗಿ ಅಭಿನಯಿಸಿ ಸರ್ವರ ಮೆಚ್ಚುಗೆಗೆ ಪಾತ್ರರಾದರು.



ಹಾಲಿ ಅಧ್ಯಕ್ಷರಾದ ರೊ. ಕೆ.ಸೂರ್ಯನಾರಾಯಣ ಉಡುಪರು ಮತ್ತು ಕಾರ್ಯದರ್ಶಿ ರೊ.ಎನ್. ಜಿ. ಉಷಾರವರಿಗೆ ಸಹಕಾರ ಹಾಗೂ ದೇಣಿಗೆ ನೀಡಿದವರಿಗೆ ನೆನಪಿನ ಕಾಣಿಕೆ ನೀಡಲಾಯಿತು.



ರೊ. ಟಿ.ಕೆ.ಎಂ. ಭಟ್‌ರವರು ಆಗಸ್ಟ್ ತಿಂಗಳಲ್ಲಿ ಶೇ 100% ಹಾಜರಾದ ಸದಸ್ಯರುಗಳನ್ನು ವೇದಿಕೆಗೆ ಆಹ್ವಾನಿಸಿ ನೆನಪಿನ ಕಾಣಿಕೆಯನ್ನು ಅಧ್ಯಕ್ಷರಿಂದ ಕೊಡಿಸಿದರು.




ಸೆಂಟಿನರಿ ಟ್ರಸ್ಟ್‌ನ ಚೇರ್ಮನ್ ರೊ.ಎನ್. ಎಸ್. ಶ್ರೀಧರ್‌ರವರಿಗೆ ಅಧ್ಯಕ್ಷರು ಯುವಕೇಂದ್ರಕ್ಕೆ ನೀಡಬೇಕಾದ ಚೆಕ್‌ವೊಂದನ್ನು ನೀಡಿದರು. ನಂತರ ರೊ. ಎನ್.ಜಿ. ಉಷಾರವರಿಂದ ವಂದನಾರ್ಪಣೆಯಾಯಿತು. ರಾಷ್ಟ್ರಗೀತೆ ಅದಕ್ಕೆ ಪೂರಕವಾಗಿ ರೊ.ವೈ.ವಿ. ವೆಂಕಟರಮಣ ಜೋಯ್ಸ್‌ರವರಿಂದ ಭಾರತ ಮಾತಾ ಕೀ ಜೈಘೋಷಣೆಯ ನಂತರ ಪುಷ್ಕಳ ಭೋಜನದೊಂದಿಗೆ ಸಭೆ ಮುಕ್ತಾಯವಾಯಿತು.

***ROTARY DESIGNATED MONTH PROJECT - SEPTEMBER TOPIC-BASIC EDUCATION AND LITERACY***

# LITERACY WEEK
# VIKASANA




*Training Program for NES High School Students on the Topic-Study Techniques*




*Training Program for High School Students on the Topic - Memory Techniques*




*Providing Educational books to School Libraray*




*Providing School bags to Poor Students of Tunga High School*




*Training Program for Government Junior College, Kumsi-on the Topic-You are the Architect of Your Future*




*Interact Club Teacher Co-ordinator's Meet - Short Description about the Project Theme - Knowledge is Power*

## ಸೆಪ್ಟೆಂಬರ್ ತಿಂಗಳ ಶೇ 100 ಹಾಜರಾತಿ ಸದಸ್ಯರುಗಳು

ರೊ. ಟಿ.ಆರ್. ಅಶ್ವಥನಾರಾಯಣ್
ರೊ. ಗಾಯತ್ರಿ ಸುಮತೀಂದ್ರ
ರೊ. ಎಸ್. ಜಿ. ಗೋಪಾಲ್
ರೊ. ಜಗದೀಶ್‌ಕಾಮತ್
ರೊ. ಕಿಶೋರ್ ಶೀರನಾಳಿ
ರೊ. ಟಿ.ಕೆ.ಎಂ. ಭಟ್
ರೊ. ಎ ಮಂಜುನಾಥ್
ರೊ. ಡಿ.ಪಿ. ಮೋಹನ್
ರೊ. ಹೆಚ್.ಎಸ್. ಮೋಹನ್
ರೊ. ಎನ್.ವಿ.ಭಟ್
ರೊ. ಡಿ.ಎಸ್. ನಟರಾಜ್
ರೊ. ಪೇಟೆ ಅಜಯಕುಮಾರ್
ರೊ. ರಮಾಗೋಪಾಲ್
ರೊ. ಎನ್.ಎಸ್. ಶ್ರೀಧರ್
ರೊ. ಸುನೀತಾ ಶ್ರೀಧರ್
ರೊ. ಕೆ. ಸೂರ್ಯನಾರಾಯಣ ಉಡುಪ
ರೊ. ವೀರಣ್ಣ ಎ. ಹುಗ್ಗಿ
ರೊ. ವೆಂಕಟರಮಣ ಜಿ. ಹೆಗಡೆ
ರೊ. ವಿಶ್ವಾಸ್ ಎಲಬುರ್ಗಿ
ರೊ. ಉಷಾ ಎನ್.ಜಿ.



*We Attended the Special Program - the launching of Biodiversity Forest Phase 2 in Shivamogga*



## ಸಂಪಾದಕೀಯ

### ಒಂದೇ ಬೇಡಿಕೆ

**ಬೇಡಿದುದನೀವನೀಶ್ವರನೆಂಬ ನಚ್ಚಿಲ್ಲ ।**
**ಬೇಡಲೊಳಿತಾವುದೆಂಬುದರರಿವುಮಿಲ್ಲ ॥**
**ಕೂಡಿ ಬಂದುದನೆ ನೀನ್ ಅವನಿಚ್ಛೆಯೆಂದುಕೊಳೆ ।**
**ನೀಡುಗೆದೆ ಗಟ್ಟಿಯನು –ಮಂಕುತಿಮ್ಮ ॥**

ನಾವು ಬೇಡಿದ್ದನ್ನು ಈಶ್ವರ ನೀಡುತ್ತಾನೆಂಬ ನಂಬಿಕೆಯಿಲ್ಲ. ಬೇಡಲು ಯಾವುದು ಒಳಿತು ಎನ್ನುವುದರ ಅರಿವೂ ಇಲ್ಲ. ಯಾವುದು ಕೂಡಿ ಬರುತ್ತದೋ ಅದನ್ನೇ ಈಶ್ವರನ ಇಚ್ಛೆಯೆಂದು ಅನುಭವಿಸು. ಅದಕ್ಕೆ ಎದೆಯನ್ನು ಗಟ್ಟಿಮಾಡು ಎಂದು ಬೇಡು.

ಭಗವಂತನನ್ನು ನಾವು ನಿತ್ಯವೂ ಬೇಡುತ್ತಲೇ ಇರುತ್ತೇವೆ. ನಮ್ಮ ಬೇಡಿಕೆಯ ಪಟ್ಟಿಗೆ ಅಂತ್ಯವೇ ಇಲ್ಲ. ಆದರೆ ಭಗವಂತ ನಾವು ಕೇಳಿದ್ದನ್ನೆಲ್ಲ ಕೊಡುತ್ತಾನೆಯೇ? ಬಹುಶಃ ನಾವು ಮಾಡಿದ ಕರ್ಮಗಳಿಗೆ ಸರಿಯಾದ ಫಲವನ್ನು ಮಾತ್ರ ಕೊಡುತ್ತಾನೆ.

ಅದು ಮಾತ್ರವಲ್ಲ, ನಮಗಾಗಿ ಏನು ಬೇಡಿಕೊಳ್ಳಬೇಕೆಂಬುದರ ಅರಿವೂ ನನಗಿಲ್ಲ. ಯಾವುದನ್ನು ಬೇಡಿದರೆ ಒಳ್ಳೆಯದು ಎಂದುಕೊಳ್ಳುತ್ತೇವೋ ಅದು ನಮಗೆ ಆಪತ್ತನ್ನೇ ತರಬಹುದು. ಪುರಾಣ, ಇತಿಹಾಸಗಳಲ್ಲಿ ಇಂಥ ಅನೇಕ ಬೇಡಿಕೆಗಳು ಶಾಪಗಳಾದುವನ್ನು ಓದಿದ್ದೇವೆ. ಭಸ್ಮಾಸುರ ಬೇಡಿದ ವರ ಅವನನ್ನೇ ಸುಟ್ಟಿತು. ಹಿರಣ್ಯಕಶಿಪು ಅತಿಯಾದ ಬುದ್ಧಿವಂತಿಕೆಯಿಂದ ಭಗವಂತ ಮರಣ ತಂದ. ನನ್ನ ಗೆಳೆಯರೊಬ್ಬರಿಗೆ ಬೆಟ್ಟದ ಮೇಲಿರುವುದು ಬಹಳ ಇಷ್ಟ. ಅದಕ್ಕಾಗಿ ಮೇಲಾಧಿಕಾರಿಗಳನ್ನು ಕಾಡಿ, ಬೇಡಿ ಮಡಿಕೇರಿಗೆ ವರ್ಗಮಾಡಿಸಿಕೊಂಡರು. ಬೆಟ್ಟದ ತುದಿಯ ಮೇಲೊಂದು ಮನೆ ತೆಗೆದುಕೊಂಡು ತಮ್ಮ ಕನಸು ಈಡೇರಿತೆಂದು ಸಂತೋಷಪಟ್ಟರು. ಮುಂದೆ ಮೂರು ತಿಂಗಳಿಗೆ ವಿಪರೀತ ಮಳೆಯಾಗಿ, ಬೆಟ್ಟ ಕುಸಿದು, ಮನೆ ಮುರಿದು ಹೋಗಿ, ತೀರಿಹೋದರು. ಅವರು ಬೇಡಿದ್ದು ವರವೋ ಶಾಪವೋ ?

ಅದಕ್ಕೆ ಕಗ್ಗ ಹೇಳುತ್ತದೆ. ನಾವು ಕೇಳಿದ್ದನ್ನು ಭಗವಂತ ಕೊಡುತ್ತಾನೆ ಎಂಬ ಖಾತ್ರಿ ಇಲ್ಲ. ನಾವು ಬೇಡುವುದು ನಮಗೆ ಒಳ್ಳೆಯದೊ, ಕೆಟ್ಟದೋ ಎಂಬುದೂ ತಿಳಿದಿಲ್ಲ. ಹಾಗಾದರೆ ಏನು ಮಾಡಬೇಕು? ಭಗವಂತನಲ್ಲಿ ಏನನ್ನೂ ಬೇಡುವುದು ಬೇಡ. ಅವನು ನಮ್ಮ ಕರ್ಮಕ್ಕೆ ತಕ್ಕ ಫಲವನ್ನು ಕೊಡುತ್ತಾನೆ ಎಂದುಕೊಂಡು ಪ್ರಾಮಾಣಿಕ ಕಾರ್ಯಗಳನ್ನು ಮಾಡುತ್ತ, ಬಂದದ್ದನ್ನೇ ಅವನ ಇಚ್ಛೆ ಎಂದು ಅನುಭವಿಸಬೇಕು. ಏನು ಬಂದರೂ ಅದು ಅವನ ಕೃಪೆ ಎಂದು 'ಭಗವಂತಾ ನೀನು ನೀಡಿದ್ದು ನನಗೆ ಒಪ್ಪಿತ. ಆದರೆ ಬಂದದ್ದನ್ನು ಎದುರಿಸಲು ಧೈರ್ಯಕೊಡು, ನನ್ನ ಎದೆಯನ್ನು ಗಟ್ಟಿಮಾಡು', ಅದೊಂದೇ ಬೇಡಿಕೆ ಸಾಕು.

● **ರೊ. ಎಂ. ಮಾಧವಾಚಾರ್**

## ಜನ್ಮ ದಿನದ ಶುಭಾಶಯಗಳು



**R.Anand**
**26th Sept**



**Rakesh Gowda**
**26th Sept**



*N.H.Prabhakar*
*28th Sept*

## ನೂತನ ಸದಸ್ಯರ ಪರಿಚಯ...



Name: Rtn. **Dr. Puneeth Isloor**
Spouse Name: **Dr. Ramya Nayak**
Profession: **Opthamologist**
**Retina Surgeon**
**Sagar Nursing Home**
Children Name: **Parigna Isloor**
Birthday Date : **9th June**
Wedding Anniversary: **27th Dec.**
Mob.No.: 88676 57027
Proposed by : N.G.Usha

## ನಮ್ಮ ರೋಟರಿ ಕ್ಲಬ್ ಕಾರ್ಯಕ್ರಮಗಳಿಗೆ ದೇಣಿಗೆ ನೀಡಿ ಸಹಕರಿಸಿದವರು

| | | |
|---|---|---|
| 1. | *Rtn. Veeranna A. Huggi* | *20,000/-* |
| 2. | *Rtn. Suman Rao* | *20,000/-* |
| 3. | *Rtn. D.S. Nataraj (Chairman, 75th Anniversary Trust)* | *15,000/-* |
| 4. | *Rtn. K.C. Dasharath* | *6000/-* |
| 5. | *Rtn. A. Sathish Kumar* | *4000/-* |
| 6. | *Non Rotarian-Shivaram Bhat* | *3500/-* |
| 7. | *Rtn. B.M. Gopal* | *3000/-* |
| 8. | *Rtn. Krishna Murthy (Ramu)* | *2500/-* |
| 9. | *Rtn. Kishore Sheernaly* | *2000/-* |
| 10. | *Rtn. A Manjunath* | *2000/-* |
| 11. | *Dr. Vagdevi H.M.* | *1343/-* |
| 12. | *Rtn. V. Srinivas* | *1000/-* |
| 13. | *Rtn. S.G. Goopal* | *1000/-* |

## *DISTRICT CULTURAL MEET*

** District Level, 10-11-2024, Kundapura*
** Zonal Level, 27-10-2024, Shikaripura*

| | |
|---|---|
| *1) Bhakthigeete* | *5min* |
| *2) Film Song (Solo)* | *5min* |
| *3) Duet Song* | *5min* |
| *4) Group Dance (Film or Folk)* | *5min* |
| *5) Mono Acting* | *5min* |
| *6) Group Song* | *5min* |
| *7) Dance (Solo) (Annet or John)* | *5min* |
| *8) Skit* | *14 Min* |

ಹೆಚ್ಚಿನ ವಿವರಗಳಿಗೆ
ಸಂಪರ್ಕಿಸಿ:
ರೊ. ಎಂ.ಎನ್.ಎಸ್. ಮಣಿ
9844470999

## ಚಿಂತನ

ಬಾಳೊಂದು ಸುಂದರ ಪಯಣ
ಯಾರು ಅರಿಯರು ನಿಲುಗಡೆಯ ಕ್ಷಣ
ಉಳಿವುದು ಸವಿನೆನಪಿನ ಸುಂದರ ತೋರಣ
ಪಯಣದ ದಿನಗಳ ಸವಿಯಾಗಿಸೋಣ.

– ರೊ. ಎನ್.ಜಿ. ಉಷಾ

To, *Book Post*